# ಪ್ರಕೃತಿಗೆ ಮನುಷ್ಯನ ಕೊಡುಗೆ ಶೂನ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಪ್ರಕೃತಿಯಿಂದ ಎಲ್ಲವನ್ನೂ ಪಡೆಯುವ ನಾವು, ಅದಕ್ಕೆ ಏನನ್ನೂ ನೀಡುವುದಿಲ್ಲ ಎಂದು ಸಾವಯವ ಕೃಷಿಕ ಬೆಕ್ಕ ರಾಘವೇಂದ್ರ ಹೇಳಿದರು.

ತಾಲ್ಲೂಕಿನ ಹಾರೋ ಸೋಮನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಪರಿಸರ ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರಕೃತಿಗೆ ಮನುಷ್ಯನ ಕೊಡುಗೆ ಏನೂ ಇಲ್ಲ ಎಂದರು.

ಮನುಷ್ಯನು ತಮ್ಮ ಅನುಕೂಲಕ್ಕೆ ಬೇಕಾಂದಂತೆಲ್ಲ ಪರಿಸರವನ್ನು ಉಪಯೋಗಿಸಿಕೊಳ್ಳುತ್ತಿದ್ದು ತಮಗಿಷ್ಟ ಬಂದಂತೆ ದಾಳಿ ಮಾಡುತ್ತಿದ್ದಾನೆ. ಆದರೆ ನಾವು ಬದುಕುಳಿದು ನೆಲೆ ನಿಂತಿರುವ ಪ್ರಕೃತಿಯನ್ನು ಉಳಿಸಿಕೊಳ್ಳಬೇಕು ಎಂಬ ಚಿಂತನೆ ಇಲ್ಲದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪರಿಸರದಲ್ಲಿ ಪರಾಗ ಸ್ಪರ್ಷ ಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಜೇನು ಸಂತತಿಯು ಇತ್ತೀಚಿನ ದಿನಗಳಿಂದ ಕ್ಷೀಣಿಸುತ್ತಿದೆ. ಮನುಷ್ಯನ ದರಾಸೆಯಿಂದ ಪಕ್ಷಿಗಳು ಸಹ ಗೂಡು ಕಟ್ಟಿಕೊಳ್ಳಲು ಇಲ್ಲದಂತೆ ಪರಿಸರದಲ್ಲಿ ಗಿಡ ಮರಗಳು ನಾಶವಾಗುತ್ತಿವೆ. ಇನ್ನೂ ಮೊಬೈಲ್ ನೆಟ್ವರ್ಕ್ ಬಂದ ಮೇಲಂತು ಹಕ್ಕಿ-ಪಕ್ಷಿಗಳೇ ಇಲ್ಲದಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಪೂರ್ವಜರು ಮನೆ ಬಳಕೆಗೆ ಅಗತ್ಯ ಹಾಗೂ ಸಾಕಾಗುವಷ್ಟು ಸೊಪ್ಪು-ತರಕಾರಿಗಳನ್ನು ಮನೆಯ ಹಿತ್ತಲಿನಲ್ಲಿಯೇ ಕೊಟ್ಟಗೆ ಗೊಬ್ಬರ ಬಳಸಿ ಬೆಳೆದುಕೊಳ್ಳುತಿದ್ದರು. ಆದರೆ ನಾವು ಎಲ್ಲವನ್ನೂ ಕೊಂಡು ತಿನ್ನುತಿದ್ದೇವೆ. ಹೆಚ್ಚು ರಾಸಾಯನಿಕ ಗೊಬ್ಬರ ಬಳಸಿ ಹಾಗೂ ವಿಪರೀತ ಔಷಧಿಗಳನ್ನು ಸಿಂಪಡಿಸಿ ಬೆಳೆಯುತ್ತಿರುವ ಹಣ್ಣು, ಸೊಪ್ಪು ಹಾಗೂ ತರಕಾರಿ ಉಪಯೋಗಿಸುತ್ತಿರುವ ಪರಿಣಾಮ ಆರೋಗ್ಯ ಕಳೆದುಕೊಳ್ಳುತ್ತಿದ್ದೇವೆ ಎಂದು ಎಚ್ಚರಿಸಿದರು.

ಕೆಮಿಕಲ್ ಮಿಶ್ರಿತ ಅಂಗಡಿ ಎಣ್ಣೆ ಬಳಕೆಯಿಂದ ಇನ್ನಿಲ್ಲದ ರೋಗಗಳಿಗೆ ತುತ್ತಾಗುತಿದ್ದೇವೆ. ಈಗಾಗಲೇ ವಯಸ್ಕರಾದ ನಾವು ಆರೋಗ್ಯ ಕಳೆದುಕೊಂಡಿದ್ದೇವೆ. ಆದರೆ ಮುಂದಿನ ಪೀಳಿಗೆಯ ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ದಯವಿಟ್ಟು ಸರ್ಕಾರವು ಶಾಲೆಗಳ ಬಿಸಿಯೂಟಕ್ಕೆ ಬಳಕೆ ಮಾಡುತ್ತಿರುವ ಕೆಮಿಕಲ್ ಎಣ್ಣೆ ಬದಲಿಸಿ ಕೊಬ್ಬರಿ ಎಣ್ಣೆ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಯೋಜನೆಯ ಕೃಷಿ ಅಧಿಕಾರಿ ಮಹದೇವ ಪ್ರಸಾದ್ ಮಾತನಾಡಿ, ನಾಲಿಗೆಗೆ ರುಚಿ ಎನಿಸುವ ಆಹಾರವನ್ನು ಸವಿಯುವ ಬರದಲ್ಲಿ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ರುಚಿಯ ಜೊತೆಗೆ ಪೌಷ್ಟಿಕ ಹಾಗೂ ಅರೋಗ್ಯಕ್ಕೆ ಅಗತ್ಯವಿರುವ ಆಹಾರ ಬಳಕೆ ಅಗತ್ಯವಿದೆ. ಸಾವಯವ ಕೃಷಿಯಿಂದ ಬೆಳೆದ ಆಹಾರ ಪದಾರ್ಥಗಳನ್ನು ಬಳಕೆ ಮಾಡುವುದು ಸೂಕ್ತ ಎಂದರು.

ಯೋಜನೆ ವತಿಯಿಂದ ಆಯೋಜಿಸಿದ್ದ ಚಿತ್ರಕಲೆ, ಪ್ರಭಂದ ಸ್ಪರ್ಧೆ ಹಾಗೂ ಎಲೆಗಳನ್ನು ಗುರುತಿಸುವ ಸ್ಪರ್ಧೆಗಳಲ್ಲಿ ಗೆಲವು ಸಾಧಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.

ವಲಯದ ಮೇಲ್ವಿಚಾರಕ ರಮೇಶ್, ಶಾಲಾ ಮುಖ್ಯಶಿಕ್ಷಕ ಡಿ.ಆರ್.ನಾಗರಾಜ್, ಸಹಶಿಕ್ಷಕರಾದ ಚೆಲುವರಾಯಸ್ವಾಮಿ, ದರ್ಶನ್, ಆಲಸ್ವಾಮಿ, ಕವಿತಾ, ಸೇವಾ ಪ್ರತಿನಿಧಿ ಅನಿತಾ ಹಾಗೂ ಇತರರಿದ್ದರು.

# ಜ್ಞಾನಪ್ರಭ ಶಾಲೆ ಬಾಲಕೀಯರು ಚಾಂಪಿಯನ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಚನ್ನರಾಯಪಟ್ಟಣ: ತುಮಕೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನವದೆಹಲಿಯ ಸಿಐಎಸ್‌ಸಿಈ ಬೋರ್ಡ್ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ವಲಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ತಾಲ್ಲೂಕಿನ ಹಿರೀಸಾವೆಯ ಜ್ಞಾನಪ್ರಭ ಇಂಟರ್ ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿಗಳು ವಿಜೇತರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

14 ವರ್ಷ ಒಳಪಟ್ಟ ಬಾಲಕಿಯರ ವಿಭಾಗದಲ್ಲಿ 100 ಮೀಟರ್ ಹಾಗೂ 200 ಮೀ. ಓಟದಲ್ಲಿ ಬಿ.ಕೆ.ಸ್ಮಿತಾ (ಪ್ರಥಮ), ತನುಶ್ರೀ ಬಿ.ಎಂ (ದ್ವಿತೀಯ), 400 ಮೀ. ಓಟದಲ್ಲಿ ಆರ್.ಹರ್ಷಿತ (ತೃತೀಯ), 80 ಮೀಟರ್ ಹರ್ಡಲ್ಸ್‌ನಲ್ಲಿ ಆರ್.ಹರ್ಷಿತಾ (ಪ್ರಥಮ) ಹಾಗೂ ತೇಜಸ್ವಿನಿ ಎಂ.ಎನ್ (ದ್ವಿತೀಯ) ಸ್ಥಾನ ಪಡೆದಿದ್ದಾರೆ. ಉದ್ದ ಜಿಗಿತದಲ್ಲಿ ತೇಜಸ್ವಿನಿ ಎಂ.ಎನ್ (ಪ್ರಥಮ), ಹರ್ಷಿತ.ಆರ್ (ತೃತೀಯ), ರಿಲೇ ಓಟದಲ್ಲಿ ಸ್ಮಿತಾ ಬಿ.ಕೆ., ತೇಜಸ್ವಿನಿ ಎಂ.ಎನ್., ಹರ್ಷಿತ. ಆರ್, ತನುಶ್ರೀ ಬಿ.ಎನ್ ಅವರನ್ನು ಒಳಗೊಂಡ ಬಾಲಕಿಯರ ತಂಡವು ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.

ಒಟ್ಟಾರೆ 14 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ಜ್ಞಾನಪ್ರಭಾ ಶಾಲೆಯು ಚಾಂಪಿಯನ್ ಪಟ್ಟ ಅಲಂಕರಿಸಿದ್ದು ಬಾಲಕಿಯರ ವೈಯಕ್ತಿಕ ಚಾಂಪಿಯನ್ ಶಿಪ್ ಅನ್ನು ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಸ್ಮಿತಾ ಬಿ.ಕೆ ಪಡೆದುಕೊಂಡಿದ್ದಾರೆ.

14 ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ ಪವನ್ 400 ಮೀಟರ್ ಓಟದಲ್ಲಿ ಮೂರನೇ ಸ್ಥಾನವನ್ನು ಪಡೆದಿದ್ದಾರೆ. ಇತ್ತೀಚಿಗೆ ಪೋದಾರ್ ಇಂಟರ್ನ್ಯಾಷನಲ್ ಶಾಲೆ ಹಾಸನದಲ್ಲಿ ನಡೆದ ವಲಯ ಮಟ್ಟದ ಖೋ-ಖೋ ಬಾಲಕಿಯರ ವಿಭಾಗದ ಕ್ರೀಡೆಯಲ್ಲಿ ತೃತೀಯ ಸ್ಥಾನವನ್ನು ಹಾಗೂ ಚಿಕ್ಕಮಗಳೂರಿನಲ್ಲಿ ನಡೆದ ವಲಯ ಮಟ್ಟದ ಬಾಲಕಿಯರ ಕಬಡ್ಡಿ ಕ್ರೀಡೆಯಲ್ಲಿ ದ್ವಿತೀಯ ಸ್ಥಾನವನ್ನು ಶಾಲೆಯು ಪಡೆದುಕೊಂಡಿರುವುದು ವಿಶೇಷವಾಗಿದೆ.

ಮೇಲ್ಕಂಡ ಎಲ್ಲಾ ವಿದ್ಯಾರ್ಥಿಗಳು ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ನಿಖಿಲ್ ಅಂತೋನಿ ಅವರನ್ನು ಶಾಲೆ ವತಿಯಿಂದ ಮಂಗಳವಾರ ಅಭಿನಂಧಿಸಲಾಯಿತು. ಅಧ್ಯಕ್ಷ ಎ.ಜಿ.ಪ್ರಭಾಕರ್, ಕಾರ್ಯದರ್ಶಿ ಎಂ.ಕೆ.ಹರೀಶ್, ಪ್ರಾಂಶುಪಾಲ ಸಂಜಯ್ ಕ್ರಿಸ್ಟೋಫರ್, ಶಿಕ್ಷಕ ವೃಂದ ಹಾಗೂ ಬೋಧಕೇತರ ಸಿಬ್ಬಂದಿ ಹಾಜರಿದ್ದರು.

# ಸಿಎ ಪರೀಕ್ಷೆ: ಸಾಧನ ವಿದ್ಯಾರ್ಥಿಗಳ ಸಾಧನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೂನ್‌ನಲ್ಲಿ ನಡೆದ ಸಿಎ ಫೌಂಡೇಶನ್ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು ಸಾಧನಾ ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳಾದ ಆದಿತ್ಯ ವಸಿಷ್ಟ (217) ಮತ್ತು ವಫಾ (201) ಉತ್ತೀರ್ಣರಾಗಿದ್ದಾರೆ. ಈ ವರೆಗೆ ಸಾಧನಾ ಪಿಯು ಕಾಲೇಜಿನಿಂದ 14 ವಿದ್ಯಾರ್ಥಿಗಳು ಸಿಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

# ಹಾಸ್ಟೆಲ್‌ಗಳಲ್ಲಿ ಹೊರಗಿನ ತಿಂಡಿ, ಬೇಕರಿ ಪದಾರ್ಥ ನಿಷೇಧ

ಹಾಸನ: ಜಿಲ್ಲೆಯ ವಸತಿ ನಿಲಯಗಳ ವಿದ್ಯಾರ್ಥಿಗಳು ಹೊರಗಿನ ತಿಂಡಿ, ತಿನಿಸು ಸೇವಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿ ಗುಣಮಟ್ಟದ ಆಹಾರ ವಿತರಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿರುವ ಅವರು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಹೇಳಿದ್ದಾರೆ. ಚಿಕ್ಕವಯಸ್ಸಿನವರಲ್ಲೇ ಹೃದಯಾಘಾತ ಪ್ರಕರಣ ಹೆಚ್ಚುತ್ತಿರುವುದು ಹಾಗೂ ಹಾಸ್ಟೆಲ್‌ಗಳಲ್ಲಿ ಹೊರಗಿನ ತಿಂಡಿ, ಸ್ನ್ಯಾಕ್ಸ್, ಬೇಕರಿ ಪದಾರ್ಥ ಹಾಗೂ ಫುಡ್ ಸ್ಟ್ರೀಟ್‌ಗಳಲ್ಲಿ ತಿನಿಸುಗಳನ್ನು ತಿಂದ ನಂತರ ಆಹಾರ ವಿಷ ಪ್ರಕರಣಗಳು ಬೆಳಕಿಗೆ ಬಂದಿವೆಯೆಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಹೊರಗಿನಿಂದ ಊಟ, ತಿಂಡಿ ಪದಾರ್ಥ ತರಬಾರದೆಂದು ವಿದ್ಯಾರ್ಥಿಗಳಿಗೆ ನಿಲಯ ಪಾಲಕರು ತಿಳಿಹೇಳಬೇಕು. ಹಾಸ್ಟೆಲ್‌ನ ಅಡುಗೆ ಕೋಣೆ ಹಾಗೂ ಪಾತ್ರೆಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಆಹಾರ ಪದಾರ್ಥಗಳಲ್ಲಿ ಕಸ-ಕಡ್ಡಿ, ಸಣ್ಣ ಕಲ್ಲುಗಳಿಲ್ಲದಂತೆ ಸ್ವಚ್ಛಗೊಳಿಸಬೇಕು. ಅಡುಗೆ ತಯಾರಿಸಲು ಶುದ್ಧ ನೀರು ಬಳಸಬೇಕು. ಅಡುಗೆ ಸಿಬ್ಬಂದಿ ಶುಚಿಯಾದ ಬಟ್ಟೆ ಧರಿಸಬೇಕು ಹಾಗು ಆವರಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಿಗೆ ಮೆನು ಚಾರ್ಟ್ ಪ್ರಕಾರ ಆಹಾರ ತಯಾರಿಸಿ ಹಲ್ಲಿ, ಜಿರಲೆಗಳು ಬೀಳದಂತೆ ಪಾತ್ರೆಗಳ ಮೇಲೆ ಮುಚ್ಚಿರಬೇಕು. ಸಾಂಬಾರಿಗೆ ಬಳಸುವ ಕಾಳುಗಳನ್ನು ಮೊಳಕೆ ಕಟ್ಟಿ ಉಪಯೋಗಿಸುವ ಮೂಲಕ ಪ್ರೋಟಿನ್‌ಯುಕ್ತ ಆಹಾರ ನೀಡಬೇಕು. ಊಟ ಮತ್ತು ತಿಂಡಿ ವಿತರಿಸುವ ವೇಳೆ ನಿಲಯ ಪಾಲಕರು ಹಾಜರಿದ್ದು ಉಸ್ತುವಾರಿ ವಹಿಸಬೇಕೆಂದು ಸೂಚನೆ ನೀಡಿದ್ದಾರೆ.

# ಸಾಮರಸ್ಯದ ಮೊಹರಂ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪಟ್ಟಣದ ಮುಸ್ಲಿಂ ಬಾಂಧವರು ಸಾಂಪ್ರದಾಯಿಕ ಮೊಹರಂ ಹಬ್ಬವನ್ನು ಅಂಜುಮಾನ್ ಎ ಅನಸರುಲ್ ಮೆಹದಿ, ಸಂಘದ ಧರ್ಮಗುರು ನವೀದ್ ಅಬಿದಿ ಅವರ ನೇತೃತ್ವದಲ್ಲಿ ಆಚರಣೆ ಮಾಡಿದರು.

ಜಯಚಾಮರಾಜೇಂದ್ರ ವೃತ್ತದ ಬಳಿ ಇರುವ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಸಮಾವೇಶಗೊಂಡ ಮುಸ್ಲಿಂ ಸಮುದಾಯದವರು, ಸಾರ್ವಜನಿಕರಿಗೆ ನೀರಿನ ಬಾಟಲಿ ಹಂಚುವ ಮೂಲಕ ಹಿಂದು ಮುಸ್ಲಿಂ ಸಮುದಾಯದ ಸಾಮರಸ್ಯಕ್ಕೆ ಮೆರುಗು ತಂದರು. ಮತ್ತು ಹೂವಿನಿಂದ ಅಲಂಕೃತವಾದ ಅವರ ವಾಹನದಲ್ಲಿ ತ್ರಿವರ್ಣ ಧ್ವಜವನ್ನು ಮತ್ತು ಅರಿಶಿನ ಕುಂಕುಮದ ಸಂಕೇತದ ಕನ್ನಡ ಧ್ವಜವನ್ನು ಬಳಸಿ ರಾಜ್ಯದ ಮತ್ತು ದೇಶ ಪ್ರೇಮವನ್ನು ಪ್ರತಿಬಿಂಬಿಸಿದರು.

# ರೋಟರಿ ಮಿಡ್‌ಟೌನ್‌ಗೆ ಪದಾಧಿಕಾರಿಗಳ ಆಯ್ಕೆ




ಹಾಸನ: ರೋಟರಿ ಮಿಡ್ ಟೌನ್‌ನ 2025-26ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇತ್ತೀಚೆಗೆ ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ನೆರವೇರಿತು.

ರೋಟರಿ ಮಿಡ್‌ಟೌನ್ ಅಧ್ಯಕ್ಷರಾಗಿ ಸಿದ್ದೇಶ್ವರ, ಕಾರ್ಯದರ್ಶಿಯಾಗಿ ಅರುಣ ಗೌಡ, ಖಜಾಂಚಿಯಾಗಿ ಭವಾನಿ ಅಧಿಕಾರ ವಹಿಸಿಕೊಂಡರು.

ನೂತನ ಅಧ್ಯಕ್ಷ ಸಿದ್ದೇಶ್ವರ ಮಾತನಾಡಿ, ರೋಟರಿಯ ಈ ವರ್ಷದ ಧ್ಯೇಯ ವಾಕ್ಯ ಸೇವೆಗಾಗಿ ಸಾಂಗತ್ಯ ಎಂಬುದಾಗಿದೆ. ಶಿಕ್ಷಣ, ರಸ್ತೆ ಸುರಕ್ಷತೆ, ಆರೋಗ್ಯ, ಪರಿಸರ ಸಂರಕ್ಷಣೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಮಾಡುವ ಸಂಕಲ್ಪ ಹೊಂದಿದ್ದೇವೆ. ಎಲ್ಲಾ ಪದಾಧಿಕಾರಿಗಳ ಸಹಾಯ ಪಡೆದು ಕೆಲಸ ಮಾಡಲಾಗುವುದು ಎಂದರು.

**Installation Officer** ಹೆಚ್.ಆರ್. ಅನಂತ್ ಮಾತನಾಡಿ, ಸಮಾಜ ಸೇವೆ ಮಾಡಿದರೆ ದೇವರ ಸೇವೆ ಮಾಡಿದಂತೆ. ಇಂತಹ ಅವಕಾಶ ನಮಗೆ ದೊರೆತಿದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದರು.

ಈ ಸಂದರ್ಭದಲ್ಲಿ ನೂತನ ಸದಸ್ಯರನ್ನು ಕ್ಲಬ್‌ಗೆ ಸೇರಿಸಿಕೊಳ್ಳಲಾಯಿತು. ರೋಟರಿ ಮಿಡ್‌ಟೌನ್ ನಿಕಟ ಪೂರ್ವ ಅಧ್ಯಕ್ಷ ಡಾ. ತೇಜಸ್ವಿ, ವೆಂಕಟೇಶ್, ಮಹೇಶ್, ಜೆ.ಎನ್. ಮಂಜುನಾಥ್, ವಲಯ ಸೇನಾನಿ ಮಮತಾ ಪಾಟೀಲ್ ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಜುಲೈ-09

**1763:** ಬಂಗಾಳದ ಪಟ್ನಾದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೇನೆ ಮತ್ತು ಮಿರ್ ಕಾಸಿಂನ ಸೇನೆಯ ನಡುವೆ ಯುದ್ಧ ನಡೆದಿತು.

**1982:** ಭಾರತದಲ್ಲಿ ಮೇಷ್ ಎಂಬ ಮೊದಲ ಸುಚಾಲಿತ ವಿಡಿಯೊ ಗ್ರಾಹಕ ಸೇವೆ (video text service) ಪ್ರಾರಂಭವಾಯಿತು.

**2006:** ಭಾರತೀಯ ಟೆನಿಸ್ ಆಟಗಾರ ರೋಹನ್ ಬೋಪಣ್ಣ ಹಾಗೂ ಪಾಕಿಸ್ತಾನದ ಐಸಾ ಕುರೇಶಿ ಏಕ ಕಾಲದಲ್ಲಿ ಡಬಲ್ಸ್ ಪಂದ್ಯವಾಡಿದರು.

**1816:** ಸ್ಪೇನ್‌ನಿಂದ ಅರ್ಜೆಂಟೀನಾ ತನ್ನ ಸ್ವಾತಂತ್ರ್ಯವನ್ನು ಘೋಷಿಸಿತು.

**1877:** ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ ಮೊದಲ ಬಾರಿಗೆ ಆಯೋಜಿಸಲಾಯಿತು.

**1991:** ದಕ್ಷಿಣ ಆಫ್ರಿಕಾದಲ್ಲಿ ಎಪರ್ಥೈಡ್ ನಿಯಮಾವಳಿಗಳನ್ನು ಅಧಿಕೃತವಾಗಿ ಕೊನೆಗೊಳಿಸಲಾಯಿತು.

**2011:** ದಕ್ಷಿಣ ಸುಡಾನ್ ಸೂಡಾನ್‌ನಿಂದ ಬೇರ್ಪಟ್ಟು ಹೊಸ ರಾಷ್ಟ್ರವಾಗಿ ಹುಟ್ಟಿತು.

### ಜನನ

**1894:** ಪರ್ ಲಾಗರ್ಕ್‌ವಿಸ್ಟ್, ನೊಬೆಲ್ ಪ್ರಶಸ್ತಿ ವಿಜೇತ ಸ್ವೀಡಿಷ್ ಕವಿ.

**1956:** ಟೋಮ್ ಹೆಂಕ್ಸರ್, ಪ್ರಸಿದ್ಧ ಅಮೆರಿಕನ್ ನಟ.


### ಮರಣ

**1932:** ಕಿಂಗ್ ಕ್ಯಾಂಪ್ಬೆಲ್-ಬನ್ನೆರ್ಮನ್, ಬ್ರಿಟನ್ ಪ್ರಧಾನಿ.

**1995:** ಜೆರಿ ಗ್ರ್ಸಿಯಾ, ಪ್ರಸಿದ್ಧ ಅಮೆರಿಕನ್ ಸಂಗೀತಗಾರ.

# ಅವನಲ್ಲ...

**– ಸಂತೋಷ್ ಕುಮಾರ ಮೆಹೆಂದಳೆ**




ಊರು ಮನೆ ಬಿಟ್ಟು ಓಡಿ ಹೋಗಿದ್ದ ಮಂಜುನಾಥ ಈಗ ಬೆಂಗಳೂರಿನ ಕೆಂಪಾಪುರದಲ್ಲಿದ್ದಾನಂತೆ, ನೀ ಒಂದ್ ಸರ್ತಿ ನೋಡಿ ಹೇಳಿದರೆ ಏನಾದರೂ ಆದೀತು. ಅಪ್ಪಯ್ಯನೂ ಭಾರಿ ಬೇಜಾರಲ್ಲಿದ್ದಾ ಮಾರಾಯ.. ಬೆಳಿಗ್ಗೆನೆ ಕರೆ ಮಾಡಿದ ರಾಘವ ದಮಯ್ಯ ಗುಡ್ಡೆ ಹಾಕುತ್ತಿದ್ದರೆ, ಆಗೀಗ ಕಿವಿಗೆ ಬಿದ್ದಿದ್ದ ಸುದ್ದಿಗಳು ಮನಸಿನ ಪರದೆಯ ಮೂಲಕ ಹಾಯ್ದು ಹೋಗಿದ್ದವು.

ಹಾಗೆ ನೋಡಿದರೆ ಮಂಜುನಾಥ್ ಮನೆ ಬಿಡಲು ಮನೆಯವರು ನೀಡುತ್ತಿದ್ದ ಕಿರುಕುಳವೇ ಕಾರಣ ಎನ್ನುವುದು ಊರವರ ಅಂದಾಜು. ಮಂಜು ಮನೆಯ ಮರ್ಯಾದೆ ತೆಗೆಯುವ ಕೆಲ್ಸ ಮಾಡ್ತಿದ್ದ, ಯಾವಾಗಲೂ ತನಗೆ ಬೇಕಾದಂತೆ ಇರುತ್ತಿದ್ದ ಅನ್ನೋದು ದೊಡ್ಡ ಆರೋಪ. ಹದಿವಯಸ್ಸಿನ ಪ್ರಕ್ಷುಬ್ಧತೆಗಳನ್ನು ದಬಾಯಿಸಿ ತಿದ್ದಲಾಗುವುದಿಲ್ಲ ಎನ್ನುವುದು ಅರಿವಾಗಬೇಕಿತ್ತಾ ದೊಡ್ಡವರಿಗೆ..? ಗೊತ್ತಿಲ್ಲ. ಆದರೆ ತೀರ ಹದಿನೈದು ತುಂಬುವ ಮೊದಲೇ ಯಾವುದೇ ನೆಲೆಯೂ ಇಲ್ಲದೆ ಬೆಂಗಳೂರಿಗೆ ಓಡಿ ಹೋದ ಎನ್ನುವುದಿದೆಯಲ್ಲ, ಅದು ಸುಲಭಕ್ಕೆ ಒಗ್ಗುವ ವಿಚಾರವಲ್ಲ.

ಹಾಗೆ ಓಡಿ ಹೋದವನನ್ನು ಮನೆಯವರು ಯಾಕೆ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ..? ಈಗ ಕೇಳಿದರೆ ಏನು ಉಪಯೋಗ..? ನಾನು ಆಗ ಉಡುಪಿ ಹಾಸ್ಟೆಲ್‌ನಿಂದ ಹಿಂದಿರುಗಿದಾಗ ಗೊತ್ತಾದ ಸುದ್ದಿ ಇದೆಲ್ಲ. ಅಷ್ಟೊತ್ತಿಗಾಗಲೇ ಮಂಜುನಾಥ್ ಮನೆ ಬಿಟ್ಟು ಓಡಿ ಹೋಗಿ ಆರೆಂಟು ತಿಂಗಳು ಕಳೆದಿತ್ತು. ಅವನ ಹಿರಿಯಣ್ಣ ರಾಘವ ಮತ್ತು ನಾನು ವಾರಿಗೆಯವರು.

ಶಂಕ್ರಾ.. ನಮ್ಮನೆ ಮಾಣಿ ಸ್ವಲ್ಪ ಪಿರಿಪಿರಿ ಅಂತಾ ಜೋರು ಮಾಡಿದ್ದು ಹೌದಾಗಿತ್ತಾ. ಆದರೆ ಈ ನಮನಿ ಮಾಡ್ಕತದೆ ಹೇಳಿ ಗೊತ್ತಿರಲಿಲ್ಯೆ ಎಂದಿದ್ದನೆ ವಿನ: ಉಳಿದ ವಿಷಯ ಏನೆಂದು ಬಿಡಿಸಿಟ್ಟಿರಲಿಲ್ಲ. ಮಂಜುನಾಥನ ಕುಟುಂಬ ತೀರ ಪಕ್ಕದ ಮನೆಯವರೇನಲ್ಲ. ಆದರೆ ಫಾಸಲೆಗೊಂದು ಮನೆಯಿರುವ ಊರಿನಲ್ಲಿ ಎಷ್ಟು ದೂರವಿದ್ದರೂ ಎಲ್ಲ ನೆರೆಹೊರೆಯವರೆ. ಮಲೆನಾಡಿನ ಅನಿವಾರ್ಯತೆ ಮತ್ತು ಅಗತ್ಯತೆ ಕೂಡಾ ಅದು. ಎಂದಿನ ತೋಟ, ಜಮೀನು, ಗದ್ದೆ, ಅಡಿಕೆ ಕಂಬಳ, ಗದ್ದೆಕೊಯ್ಲು, ಆಲೆಮನೆಗಳ ನಂತರವೂ, ಒಬ್ಬರಿಗೊಬ್ಬರು ಪ್ರತಿನಿತ್ಯ ಸಿಗದಿದ್ದರೂ ಯಾವ ಸುದ್ದಿಯೂ ನಿಲ್ಲುವುದಿಲ್ಲ. ಎಲ್ಲರ ಮನೆಯ ಮಸಾಲೆಗಳು ಮಾತ್ರ ಅದೇಗೊ ಜಾಹೀರಾಗುತ್ತಲೇ ಇರುತ್ತವೆ.

ಶಾಲೆಗೆ ಹೋಗುವಾಗ ಸರಿಯಾಗೇ ಇದ್ದ ಮಂಜುನಾಥ್ ನಂತರದ ದಿನದಲ್ಲಿ ವಿಮುಖನಾಗತೊಡಗಿದ್ದನಂತೆ. ವಾರಿಗೆಯ ಹುಡುಗರಿಂದಲೂ ಹೊರತಾಗಿ ತನ್ನದೇ ಚಟುವಟಿಕೆಲಿ ಇರುತ್ತಿದ್ದ, ಏನಾದರೂ ದುಶ್ಚಟಕ್ಕೆ ಬಿದ್ದನೋ ಎಂದೆಲ್ಲ ಊರಲ್ಲಿ ಅನುಮಾನ ಬರುವಷ್ಟು ಬದಲಾಗಿದ್ದ. ಒಂದಿಬ್ಬರ ಹುಡುಗಿಯರ ಹಿಂದೆ ಬಿದ್ದಿದ್ದ ಅನುಮಾನಗಳೂ ಹುಟ್ಟಿದ್ದವು. ಆದರೆ ಎಲ್ಲರ ನಿರೀಕ್ಷೆ ಮೀರಿ ಹದಿವಯಸ್ಸಿಗೆ ಮೊದಲೇ ಊರು ಬಿಟ್ಟ ಮಂಜುನಾಥ ಅನಾಮತ್ತು ಎರಡು ದಶಕ ಕಳೆದರೂ ಹಿಂದಿರುಗುವುದು ಸಾಯಲಿ, ಒಂದು ಸಾಲು ಸುದ್ದಿಯನ್ನೂ ಕೊಟ್ಟಿರಲಿಲ್ಲ. ಇತ್ತ ಮನೆ ಬದಿಗೆ ಇದ್ದವರೆಲ್ಲ ಅಲ್ಲಲ್ಲಿ ಹುಡುಕಿ ಕೊನೆ ಕೊನೆಗೆ ಪೋಲಿಸು ಕೇಸ್ ಕೂಡಾ ಆಗಿ ಕ್ರಮೇಣ ಮರೆತ ಅಧ್ಯಾಯವಾಗಿತ್ತು.

ಮಂಜುನಾಥನ ಮನೆಯವರಿಗೂ ಅವನು ಮನೆಯಲ್ಲಿರೋದೇ ಬೇಡವಾಗಿತ್ತಂತೆ ಅದಕ್ಕೆ ಸುಮ್ಮನಾದರು ಎನ್ನುವ ಸುದ್ದಿ ಊರಲ್ಲಿ ಗುಸುಗುಸು ಆಗಿತ್ತಾದರೂ, ಮನೆಯವರು ಹೇಳದೆ ಏನಾಗಿದೆ ಎಂದು ಗೊತ್ತಾಗುವುದಾದರೂ ಹೇಗೆ..? ಹಾಗಾಗಿ ಏನೋ ಒಂದಷ್ಟು ದುಡ್ಡು ದುಗ್ಗಾಣಿ ಒಯ್ದಿದ್ದರೂ ಮನೆಯವರು ಮುಚ್ಚಿ ಹಾಕಿದರಂತೆ. ಎಲ್ಲ ಅಂತೆ ಕಂತೆಗಳ ಸಂತೆ. ಆದರೆ ಇದ್ದಕ್ಕಿದಂತೆ ರಾಘವ ಈಗ ಹಿಂದೆ ಬಿದ್ದಿದ್ದ ನೋಡು ಶಂಕ್ರಣ್ಣ ಎಂದು. ಕಾರಣ ಎರಡನೆ ತಲೆಮಾರಿಗೆ ಆಸ್ತಿ ವ್ಯವಹಾರ ಎಲ್ಲ ಚುಕ್ತಾ ಆಗಬೇಕಿತ್ತಂತೆ. ಹಾಗಂತ ದೊಡ್ಡ ವ್ಯವಹಾರ ಅಲ್ಲದಿದ್ದರೂ ಭದ್ರ ಮಾಡಿಕೊಳ್ಳುವ ತವಕವಿತ್ತೇನೋ..?

ಹೆಬ್ಬಾಳ ಫ್ಲೈ ಓವರ್ ಹೊರತುಪಡಿಸಿ ಸೀದಾ ಒಳಹೋದರೆ ಕೆಂಪಾಪುರ. ಅದರಾಚೆಗೆ ಇನ್ನೂ ಅಪ್ಪಟ ಹಳ್ಳಿ ಎನ್ನಿಸುವ ಅಲ್ಲೊಂದು ಇಲ್ಲೊಂದು ಮನೆಗಳ ಹೊರವಲಯ. ರಾಘವ ನೀಡಿದ್ದ ಸಂಪರ್ಕ ಸಂಖ್ಯೆ ಆಧರಿಸಿ, ಇನ್ನ್ಯಾರನ್ನೋ ಹಿಡಿದು ಮಂಜುನಾಥನನ್ನು ಪತ್ತೆ ಮಾಡಿದ್ದೆ. ನೀಡಿದ್ದ ಲೋಕೆಶನ್ ಆಧರಿಸಿ ಹೋದರೆ ಬೇರಾರೋ ಅಲ್ಲಿದ್ದರು. ಏನೋ ಹೆಚ್ಚು ಕಮ್ಮಿಯಾಗಿರಬೇಕು ಎಂದುಕೊಳ್ಳುವಷ್ಟರಲ್ಲಿ,

ಶಂಕ್ರಣ್ಣ.. ಕರೆಕ್ಟ್ ಆಗೆ ಬಂದಿದ್ದೀ..ಬಾ ಬಾ.. ಅರಾಮಾ.. ಎನ್ನುವ ಮಾತಿಗೆ ನಾನು ಅವಾಕ್ಕಾಗಿ ನಿಂತಿದ್ದೆ. ನನ್ನ ನೋಟ ಅದರಲ್ಲಿನ ಅಪನಂಬುಗೆ ಇತ್ಯಾದಿ ಗಮನಿಸಿದವನಂತೆ ಮಂಜುನಾಥ್, ಇರ್ಲಿ ಬಾ, ಕಾಫಿ ಅದೀತಾ.. ಎನ್ನುತ್ತಿದ್ದರೆ ಸುಮ್ಮನೆ ಅವನನ್ನೂ ಅವನ ಮನೆಯ ಪರಿಸರವನ್ನೂ ಗಮನಿಸಿದ್ದೆ. ಮಂಜುನಾಥ್ ಒಬ್ಬನೇ ಇರಲಿಲ್ಲ. ಜೊತೆಗೆ ನಾಲ್ಕಾರು ಜನರೂ ಇದ್ದರು ಸಹಬಾಳ್ವೆ ಎನ್ನುವಂತೆ. ದೊಡ್ಡ ಹಾಲ್. ಅಲ್ಲಲ್ಲಿ ಹರಡಿದ್ದ ಸಾಮಾನುಗಳು. ಸಾಲುಸಾಲು ಮಂಚ, ಮೂಲೆಯಲ್ಲೊಂದು ಟಿ.ವಿ. ಅವರವರ ವೈಯಕ್ತಿಕ ಅಲಮಾರುಗಳು ಇತ್ಯಾದಿ.

ಉಭಯ ಕುಶಲೋಪರಿ ಮುಗಿದಿತ್ತು.

ಮಂಜುನಾಥ್ ಸುತಾರಾಂ ಊರಿಗೆ, ಮನೆಗೆ ಬರುವುದಿಲ್ಲ ಎಂದುಬಿಟ್ಟ. ಕತೆಯ ಹೊರಳು ಬೇರೆ ದಿಕ್ಕಿಗೆ ತಿರುಗಿತ್ತು.

ಏನು ಮಾಡಲಿ ಶಂಕ್ರಣ್ಣ, ನಂಗೇನು ಕಾನುಮನೆ ಹೊಸದಾ ಬರದೆ ಇರಲಿಕ್ಕೆ. ರಾತ್ರಿ ಸುಗಮ ಸರ್ವೀಸು ಹತ್ತಿದ್ರೆ, ಬೆಳಿಗ್ಗೆ ಯಲ್ಲಾಪುರ. ಆದರೆ ನನ್ನ ಪರಿಸ್ಥಿತಿಲಿ ಮನೆಗೆ ಬರೋದು ಸರಿ ಹೋಗ್ತಿತ್ತಾ..? ಮಂಜುನಾಥನ ಮಾತಿನಲ್ಲಿ ದೃಢತೆ, ಕಠಿಣತೆಗಿಂತ ಪರಿಸ್ಥಿತಿಗೆ ಹೊಂದಿ ಬದುಕಿದ ದನಿಯಲ್ಲಿ ಆತ್ಮವಿಶ್ವಾಸ ಇತ್ತು. ಎದುರಿಗಿದ್ದವನ ಕೈ ಹಿಡಿದು ಸುಮ್ಮನೆ ಕೂತಿದ್ದೆ.

ಶಂಕ್ರಣ್ಣ.. ಈಗ ನೀನೆ ನನ್ನ ನೋಡಿದ್ಯಲ್ಲ, ಹಿಂಗೇ ವಿಚಿತ್ರ ಪ್ರಾಣಿ ತರಹ ನೋಡಿದರೆ ನಾನು ಹೆಂಗಾದರೂ ಬದುಕಬಹುದಿತ್ತು..? ಇದರಲ್ಲಿ ನನ್ನ ತಪ್ಪೇನಿದೇ ಹೇಳು. ಆಗಿನ ಕಾಲಕ್ಕೆ ನಾನೂ ಸಣ್ಣಂವ, ಅರಿವು ತಿಳಿವು ಎರಡೂ ಇರದ ಕಾಲ ಅದು. ಆದರೆ ದೊಡ್ಡವರು ತಿಳಿದವರು ಅಂತೆಲ್ಲ ಇದ್ದವರಿಗಾದರೂ ನನ್ನ ಪರಿಸ್ಥಿತಿ ಗೊತ್ತಾಗಬೇಕಿತ್ತಲ್ಲ..? ಇದೆಲ್ಲ ಹೊಸದೇ ಬಿಡು ನಮ್ಮೂರು, ನಮ್ಮನೆ ಲೆಕ್ಕಕ್ಕೆ.

ಅದರೆ ನಾನೇನು ಬೇಕೆಂದೆ ಮಾಡಿಕೊಂಡಿದ್ದಾ..? ನಾನು ಹೇಗಿರಬೇಕು, ಎಲ್ಲಿ ಹೋಗಬೇಕು, ಹೋಗಬಾರದು, ಹಿಂಗೆ ನಡೆದಾಡಬೇಕು, ಹೀಗೆ ಕೂಡಬೇಕು, ನಡವಳಿಕೆಗಳಿರಬೇಕು, ಎಂದೆಲ್ಲ ಪ್ರತಿದಿನ ಟೈಮ್ ಟೇಬಲ್‌ನಂತೆ ಬದುಕಬೇಕೆಂದು ಕರಾರು ಹಾಕಿದ್ದೇ ಇವರು. ಕೂದಲಿನಿಂದ ಹಿಡಿದು, ನನ್ನ ದಿರಿಸು ಸಹಿತ ಮನೆಯವರು ನಿರ್ಧರಿಸೋಕೆ ಇಳಿದರಲ್ಲ, ಅಲ್ಲೆ ತಪ್ಪಿದ್ದು ನೋಡು. ಇದೆಲ್ಲಾ ಹೇಗೋ ಹೂಂ.. ಅನ್ನಬಹುದಿತ್ತೇನೋ ಆದರೆ ಅವರ ರೀತಿ ನೀತಿಗೂ, ನನಗೂ ಆಗಿ ಬರುತ್ತಿರಲಿಲ್ಲ ಎನ್ನೋದೇಕೆ ಅರ್ಥವಾಗಲಿಲ್ಲ ಶಂಕ್ರಣ್ಣ.

ಕೆಲಸ ಮಾಡಿಕೊಂಡಿರು, ಮರ್ಯಾದೆಯ ಜೀವನ ಇತ್ಯಾದಿ ದೊಡ್ಡದೊಡ್ಡ ಮಾತನ್ನೆಲ್ಲ ನಮ್ಮ ಪರಿಚಯಕ್ಕೆ ಬಂದ ಗಂಡಾಗಲಿ, ಹೆಣ್ಣಾಗಲಿ ಉಪದೇಶ ಕೊಡೋಕೆ ಬರ್ತಾರಲ್ಲ ಶಂಕ್ರಣ್ಣ, ಇಲ್ಕೇಳು.. ಇಂಥಾ ಭಂಡ ಬಾಳು ನಮಗೂ ಬೇಕಾಗೇ ಇಲ್ಲ. ಯಾವನಿಗೆ ಬೇಕು ದಿನಾ ಬೆಳಿಗ್ಗೆದ್ದು ಇವತ್ತೇನು ಅಂತಾ ಲೆಕ್ಕಾಚಾರದ ಬದುಕು. ಅದರೆ ಕೆಲ್ಸ ಮಾತ್ರ ಕೊಡೊವ್ರಿಲ್ಲ. ಕೊಟ್ಟರೂ ನಾಗರಿಕ ಸಮಾಜದ ಅತಿ ಬುದ್ಧಿವಂತರೇ ದೊಡ್ಡಕಂಟಕ ನೋಡು. ದಿನಾ ಹೆರಾಸ್‌ಮೆಂಟು.

ಗಾರ್ಮೆಂಟ್, ಲೆದರ್ ಉದ್ಯಮ, ಬಿಗ್‌ಬಜಾರ್ ಹೀಗೆ ಕೆಲಸಕ್ಕೆ ಅಂತ ಸೇರ್ಸೋಕೆ ಒಂದು ಸೇವಾಸಂಸ್ಥೆ ಸಹಾಯ ಮಾಡಿತ್ತು. ಆದರೆ ಪ್ರತೀ ದಿನ ಅಲ್ಲಿ ಕೆಲಸ ಮಾಡ್ತೀವಿ ಅನ್ನೋದಕ್ಕಿಂತಲೂ ನಾವು ಯಾವ ಕಡೇ ಹೋಗ್ತಿವಿ, ಯಾವ ಡ್ರೆಸ್ ಹಾಕ್ತೀವಿ, ಎಲ್ಲಿ ಮೈ ಕಾಣ್ತಿದೆ, ಕೈ ಕಾಲ ಮೇಲೆ ಕೂದಲಿದೆಯಾ ಇಲ್ವಾ..? ಯಾವ ಕ್ಯೂನಲ್ಲಿ ನಿಲ್ತೀವಿ, ಹಿಂಗೆ ಗಮನಿಸೋದರ ಜೊತೆಗೆ, ಕೈಗೆ ಸಿಕ್ಕರೆ ಒಂದ ಸರ್ತಿ ನೋಡೊಣ ಅನ್ನೋ ಗಂಡಸರೇ ಎಲ್ಲರೂ. ಹೆಂಗಾದರೂ ಒಂದು ಸರ್ತಿ ಟ್ರೈ ಮಾಡೊಣ ಅಂತಲೆ ಹತ್ರ ಆಗೋಕೆ ಕಾಯ್ತಿರ್ತಾರೆ. ಹಿಂಗೆ ಎಲ್ಲರಿಗೂ ಸದರ ಆಗಿ ಬದುಕೋದಕ್ಕಿಂತ ನಮ್ಮ ಪಾಡಿಗೆ ಇರೋದೆ ವಾಸಿ ಅಂದುಕೊಳ್ಳುವಾಗ ಪೋಲಿಸರ ಕಾಟ ಬೇರೆ. ಈಗ ಹೇಳು ನಾವು ಮನುಷ್ಯರಲ್ವಾ..? ನಮಗೂ ಆಸೆ ಆಕಾಂಕ್ಷೆಗಳಿಲ್ವಾ..? ನಮ್ಮ ಪಾಡಿಗೆ ನಾವೂ ಬದುಕು ನಡೆಸೋಕೆ ಬಿಡದ ಜನರಿಗೆ ಅದ್ಯಾವ ವಿಚಿತ್ರ ಹುಕಿ ನಮ್ಮ ಬಗ್ಗೆ ಶಂಕ್ರಣ್ಣ..? ಬೇಕಿರೋದಾದರೂ ಏನು..?.

ಮಂಜುನಾಥನ ವಾದಕ್ಕೆ ನನ್ನಲ್ಲಿ ಉತ್ತರವಿರಲಿಲ್ಲ.

..ನಿಂಗ್ ಗೊತ್ತಾ ಶಂಕ್ರಣ್ಣ, ಪ್ರತಿ ಗಂಡಸೂ ಇವತ್ತು ಒಬ್ಬಳಲ್ಲ ಒಬ್ಬಳ ಜೊತೆ ವಿಹರಿಸುವ ವ್ಯವಸ್ಥೆ ಮಾಡಿಕೊಂಡಿರ್ತಾನೆ. ಸಮಯಾವಕಾಶ ಮತ್ತು ಕಾನ್‌ಫಿಡೆನ್ಸು ಕೊಡೊ ಗಂಡಸು ಸಿಕ್ಕರೆ ಹೆಣ್ಣೂ ಕೂಡಾ ಇನ್ನೊಂದು ಸಂಬಂಧವನ್ನು ಸಲೀಸಾಗಿ ನಿಭಾಯಿಸೋ ಈಗಿನ ದಿನಮಾನದಲ್ಲಿ, ನಾನು ಮಾತ್ರ ಎಲ್ಲ ಬಿಟ್ಟು, ಮನೆತನದ ಮರ್ಯಾದೆಗೋಸ್ಕರ ಕದ್ದು ಮುಚ್ಚಿ ಒಗ್ಗದ ಬದುಕು ಹೇಗಾದರೂ ಊರಲ್ಲಿ ಬದುಕಬಹುದಿತ್ತು..?

ಎದುರಿಗೆ ಸಿಗೋ ಪ್ರತೀ ಗಂಡಸೂ ಅವಕಾಶ ಸಿಕ್ಕಾಗೆಲ್ಲ ಎಲ್ಲಿ ಒಮ್ಮೆ ತೋರ್ಸು ನೋಡೊಣ ಅಂತಾ ನೋಡೊಕೆ ನಿಂತ್ರೆ ನಮ್ಮ ಪರಿಸ್ಥಿತಿ ಏನಾಗಬೇಡ. ನಿಮಗೆಲ್ಲ ಸರಿಯಾಗಿ ಹುಟ್ಟಿ ಅನುಭವಿಸುವ ಅವಕಾಶ ದೇವರು ಕೊಟ್ಟಿರುವಾಗ, ಎರಡರ ಸಾಂಗತ್ಯಕ್ಕೂ ಸಿಕ್ಕದ, ಸಿಕ್ಕರೂ ಯಾವ ರೀತಿಯಲ್ಲೂ ಭಾವಾವೇಶಕ್ಕೂ, ಅನುಭೂತಿಗೂ ಒಳಗಾಗದೆ ಬದುಕಬೇಕಾದ ನಮ್ಮ ಮನಸ್ಥಿತಿ ಎದುರಿಗೆ, ತಾನು ಚೆನ್ನಾಗಿರೋ ಮನುಷ್ಯ ಯಾಕಾದರೂ ಹಿಂಗೆ ನಮ್ಮನ್ನು ಹಿಂಸೆ ಮಾಡ್ತಾನೆ..? ಈ ಜೀವನ ಪೂರ್ತಿ ಸುಖ ಅನ್ನೋದಕ್ಕೆ ಅಪರಿಚಿತವಾಗೇ ಬದುಕುವ ಕರ್ಮ ನಮ್ಮದು.

ನಿಂಗೆ ಗೊತ್ತಾ ಗಂಡಸು ಇಜ್ಯಾಕ್ಯೂಲೇಟ್ ಆಗ್ತಾನಂತೆ, ಹೆಂಗಸರು ಆರ್ಗ್ಯಾಸಮ್ ಅಂತಾ ಚರಮ ಸೀಮೆಯ ಸುಖ ಅನುಭವಿಸ್ತಾಳಂತೆ, ಆದರೆ ನಮ್ಮ ಪರಿಸ್ಥಿತಿ ಏನು ಅಂತ ಯಾರಾದರೂ ಕೇಳಿದಾರಾ..? ಸೈನ್ಸು, ಸೊಸೈಟಿ ಯಾಕೆ ಇದಕ್ಕೆ ಉತ್ತರ ಕೊಡಲ್ಲ. ನಮಗೆ ಮನಸ್ಸಿಗೆ, ದೇಹಕ್ಕೆ ಬಾಧೆಗಳು ಇಲ್ಲ ಅನ್ಕೊಂಡು ಬಿಟ್ರಾ ಏನ್ ಕತೆ..?

ಮನೆಯ ಜನ, ಅಣ್ಣ, ತಮ್ಮ, ಅತ್ತಿಗೆ ನಾದಿನಿ, ಅಕ್ಕ ತಂಗಿರೇ ನಮ್ಮನ್ನು ಮನುಷ್ಯರು ಅಂತಾ ಒಪ್ಪಿಕೊಂಡು ಮನೆಲಿ ಉಳಿಸಿಕೊಳ್ಳದಿದ್ದರೆ, ಸಮಾಜ ಯಾಕೆ ಒಪ್ಪಿಕೊಳ್ಳುತ್ತೆ ಹೇಳು. ಸಣ್ಣವನಿದ್ದಾಗ ಹುಡುಗನಾಗಿಯೂ, ಹೆಣ್ಣಿನಂತೆ ಆಡ್ತೀನಿ ಅಂತ ರಾಘಣ್ಣ, ಅಪ್ಪ ಎಲ್ಲ ಸೇರಿ ಹೊಡಿತಿದ್ರಲ್ಲ ಅತ್ತಿಗೆ, ಅಣ್ಣ, ಎಲ್ಲ ನೆಟ್ಟಗೆ ನಡಿಯೋ, ನುಲಿಬೇಡಾ ಎನ್ನುತ್ತಾ ತಿವಿದರೆ ಹೊರತಾಗಿ ನನ್ನ ಗಂಡಸಿನ ದೇಹದೊಳಗೆ ಹೆಣ್ಣಿನ ಮನಸ್ಸು ಅರಳಿರೋ ವೈಚಿತ್ರ್ಯದ ಬದುಕಿನ ಜೊತೆಗೆ ನಾನು ಹೆಂಗೆ ಏಗಬೇಕು ಈ ಸಮಾಜದಲ್ಲಿ ಅಂತಾ ಒಬ್ರೂ ಹೇಳಿಕೊಡಲಿಲ್ಲ ನೋಡು. ನನಗೂ ತಿಳುವಳಿಕೆ ಇರದಿದ್ರೂ, ಮನೆ ಜನ ಮಾಡೊ ಸಪೋರ್ಟು ಸಿಕ್ಕಿದ್ದಿದ್ರೆ ಹಿಂಗೆ ಬಂದು ನಮ್ಮದೆ ಸಮುದಾಯದಲ್ಲಿ ಬದುಕೋ ಅವಶ್ಯಕತೆನೂ, ಸೆಕ್ಸ್ ವರ್ಕ್‌ನ ಕರ್ಮಾನೂ ಇರ್ತಾನೆ ಇರಲಿಲ್ಲ.

ಮನೆಯಿಂದಲೇ ಈ ಬದಲಾವಣೆ ಬರದಿದ್ದರೆ ಶತಮಾನ ಕಳೆದರೂ ನಾವು ರಸ್ತೆ ಮೇಲೆ ಸಿಗ್ನಲ್‌ನಲ್ಲಿ ಭಿಕ್ಷೆ ಬೇಡೋದೆ ಆಗುತ್ತೆ. ಬೇರೇನು ಮಾಡೊಕೆ ಆಗುತ್ತೆ ನಮ್ಮ ಕೈಲಿ. ಸೆಕ್ಸ್ ವರ್ಕ್ ಮಾಡ್ಬೇಡ ಅನ್ನೋ ಸಮಾಜ, ಕದ್ದು ಮುಚ್ಚಿ ಒಬ್ಬೊಬ್ಬರಾಗಿ ಬಳಸಿಕೊಳ್ಳೊದು ಯಾವ ರೀತಿಲಿ ಭಿನ್ನ. ಪುಕ್ಕಟ್ಟೆ ಒಗ್ಗಿಕೊಳ್ಳೊದಕ್ಕಿಂತ ಹಣ ತಗೊಂಡೆ ಮಾಡಿದರೂ ಬದುಕು ನಡೆಯುತ್ತೆ. ಲಿಂಗ ನೋಡಿ ಗುರುತಿಸೋದೇ ಆದರೆ ನಿಜಕ್ಕೂ ನಾವು ಹಿಜಡಾಗಳಲ್ಲ ಶಂಕ್ರಣ್ಣ, ತಮಗೆ ಎಲ್ಲ ಇದ್ದೂ, ಏನೂ ಇಲ್ಲದ ನಮಗೆ ಒಂದು ಬದುಕು, ಸಣ್ಣ ಸೂರು, ಎರಡೊತ್ತು ಅನ್ನಕ್ಕೆ ದಾರಿ ಕೊಡಲಾಗದ ಸಮಾಜದೆದುರಿಗೆ, ನಾಗರಿಕರೆದುರಿಗೆ ಹಿಜಡಾಗಳು ನಾವಲ್ಲ.... ಎನ್ನುತ್ತಿದ್ದರೆ ಸುಮ್ಮನೆ ಮಂಜುನ ಕೈ ಹಿಡಿದು ಕೂತಿದ್ದು ಎದ್ದು ಬಂದೆ.

ಎದುರಿಗಿಸಿರಿಸಿದ್ದ ಕಾಫಿ ನಿಜಕ್ಕೂ ಚೆನ್ನಾಗೇ ಇದ್ದರೂ ಯಾಕೋ ಕಹಿ ಎನ್ನಿಸಿತ್ತು.

ಎರಡು ದಿನದ ನಂತರ ಊರಿಗೆ ರಾಘವನಿಗೆ ಕರೆ ಮಾಡಿ, ಲೈನಿಗೆ ಬರುತ್ತಲೇ ರಾಘವಾ ನೀ ಹೇಳಿದ ಕಡೆ ಹೋಗಿ ನೋಡಿದೆ, ಆದರೆ ಅಲ್ಲೆಲ್ಲ ಯಾವತ್ತೂ ಮಂಜುನಾಥ ಎನ್ನುವರಾರೂ ಇದ್ದೇ ಇರಲಿಲ್ಲವಂತೆ.. ಎನ್ನುತ್ತಾ ಮಾತು ಮುಗಿಸಿದವನು, ಮೊಬೈಲ್‌ನಲ್ಲಿ ಮಂಜುನಾಥ್ ಎಂದಿದ್ದುದನ್ನು ಮಂಜುಳಾ ಎಂದು ಸೇವ್ ಮಾಡಿಕೊಂಡೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248